**ಸಾಕ್ಷಿಯನ್ನು ದಿಃ 24-11-2022 ರಂದು ಕರೆಯಿಸಿ ಪ್ರಮಾಣೀಕರಿಸಲಾಯಿತು.**
**ಪಾಟೀ ಸವಾಲು ವಾದಿ ಪರ ಶ್ರೀ ಎಸ್ ಸಿ ಎಮ್ ವಕೀಲರಿಂದ**

ನನ್ನ ಗಂಡನ ಊರು ನಾಗಸಮುದ್ರ. ನಾನು ಶಾಲೆ ಕಲಿತಿರುವುದಿಲ್ಲ. ನನ್ನ ತಂದೆ ಹೆಸರು ನಿಂಗಪ್ಪ. ನನ್ನ ತಂದೆ ನಾವು 8 ಜನ ಮಕ್ಕಳು ಅವರುಗಳೆಂದರೆ ಲಕ್ಷ್ಮಣ, ನಾನು , ನಾರಾಯಣ , ಮೈಲಾರಿ, ಸುರೇಶ , ಬೂದೇಶ, ಅಪ್ಪಣ್ಣ ಮತ್ತು ಮಹಾಂತೇಶ ಇರುತ್ತಾರೆ. ನನ್ನ ಸಹೋದರರೆಲ್ಲರೂ ಅಂತೂರ -ಬೆಂತೂರ ಗ್ರಾಮದಲ್ಲಿ ವಾಸವಾಗಿದ್ದಾರೆ ಎಂದರೆ ಸರಿಯಲ್ಲ ಸಾಕ್ಷಿಯು ಮುಂದುವರೆದ ಅವರು ನನ್ನ ದೊಡ್ಡಪ್ಪನ ಮಕ್ಕಳು ಎಂದು ನುಡಿದಿರುತ್ತಾರೆ. ನಾವೆಲ್ಲರೂ ನಾಗಸಮುದ್ರದಲ್ಲಿ ವಾಸವಾಗಿರುತ್ತೇವೆ. ನಾಗಸಮುದ್ರದಲ್ಲಿ ಎಲ್ಲರೂ ವಾಸವಾಗಿರುತ್ತೇವೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ನಾಗಸಮುದ್ರದಲ್ಲಿ ಎಲ್ಲರೂ ವಾಸವಾಗಿರುತ್ತೇವೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಯ ಮೂಲ ಊರು ಅಂತೂರ-ಬೆಂತೂರ ಎಂದರೆ ಸರಿಯಲ್ಲ.

ಅಂತೂರ-ಬೆಂತೂರ ದಲ್ಲಿ ವಾಸವಾಗಿರುವ ನನ್ನ ದೊಡ್ಡಪ್ಪನ ಅಡ್ಡ ಹೆಸರು ಪೂಜಾರ ಮತ್ತು ಬೇರೆ ಬೇರೆ ಇದ. ಅವರ ಹೆಸರು ಅಡ್ಡ ಹೆಸರು ಚೌಹಾನ ಎಂದು ಕರೆಯುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ. ನಾಗಸಮುದ್ರಕ್ಕೆ ಬರುವ ಪೂರ್ವದಲ್ಲಿ ನಮ್ಮ ಮನೆತನದ ಅಡ್ಡ ಹೆಸರು ಚೌಹಾನ ಇದ್ದು ಕೆಲವರು ಪೂಜಾರ ಎಂದು , ಕೆಲವರು ಕಾಳೆ ಎಂದು ಕರೆಯಲ್ಪಡುತ್ತಿದ್ದರು ಎಂದರೆ ಸರಿ. ನಾನು 1 ರಿಂದ 3 ನೇ ತರಗತಿ ವರಗೆ ಶಾಲೆ ಕಲಿತ ಬಗ್ಗೆ ದಾಖಲೆಗಳನ್ನು ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ನಾನು ಶಾಲೆ ಕಲಿತಿರುವುದಿಲ್ಲ ಎಂದು ನುಡಿದಿರುತ್ತಾರೆ. ನಾರಾಯಣ 1 ರಿಂದ 6 ನೇ ತರಗತಿ ವರೆಗೆ ಶಾಲೆ ಕಲಿತ ಬಗ್ಗೆ ದಾಖಲೆ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಸದರಿಯವರು ಶಾಲೆ ಕಲಿತಿರುವುದಿಲ್ಲ ಎಂದು ನುಡಿದಿರುತ್ತಾರೆ. ಲಕ್ಷ್ಮಣ ಇತನು ಯಾವ ವರ್ಷದಲ್ಲಿ ಜನಿಸಿರುತ್ತಾನೆ ಎಂದು ನನಗೆ ಗೊತ್ತಿರುವುದಿಲ್ಲ. ಲಕ್ಷ್ಮಣ ಇತನು 1 ರಿಂದ 5 ನೇ ತರಗತಿ ವರೆಗೆ ಶಾಲೆ ಕಲಿತ ಬಗ್ಗೆ ದಾಖಲೆ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು

ಸದರಿಯವರು ಶಾಲೆ ಕಲಿತಿರುವುದಿಲ್ಲ ಎಂದು ನುಡಿದಿರುತ್ತಾರೆ. ನನ್ನ ಜನ್ಮ ದಿನಾಂಕ ನನಗೆ ಗೊತ್ತಿರುವುದಿಲ್ಲ ಆಧಾರ ಕಾರ್ಡನಲ್ಲಿ ಬರೆದಿರುತ್ತಾರೆ. ನಾನು ಶಾಲೆ ಕಲಿತಿದ್ದರೂ ಸಹ ಕಲಿತಿರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಲಕ್ಷ್ಮವ್ವ , ಚಂದವ್ವ, ನಿಂಗಪ್ಪ , ಮೇಚಪ್ಪ ಕಾಳೆ ಮತ್ತು ನನ್ನ ಪರವಾಗಿ ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ. ನಾನು ಮೇಚಪ್ಪನ ಪರವಾಗಿ ಸಾಕ್ಷ್ಯ ನುಡಿಯುತ್ತಿಲ್ಲ ಎಂದರೆ ಸರಿಯಲ್ಲ. ಮೇಚಪ್ಪ ಈ ದಿನ ನ್ಯಾಯಾಲಯಕ್ಕೆ ಬಂದಿದ್ದಾನೆ ಎಂದರೆ ಸರಿ. ಮೇಚಪ್ಪ ಇತನು ಆರೋಗ್ಯವಾಗಿದ್ದಾನೆ ಎಂದರೆ ಸಾಕ್ಷಿಯ ಸ್ವಲ್ಪ ಆರಾಮ ಇದ್ದಾನೆ ಎಂದು ನುಡಿದಿರುತ್ತಾರೆ. ನನ್ನ ತಂದೆಗೆ ಆರಾಮ ಇಲ್ಲದ ಬಗ್ಗೆ ಪ್ರಕರಣದಲ್ಲಿ ದಾಖಲೆಯನ್ನು ಸಲ್ಲಿಸಿದ್ದೇನೆ. ನನ್ನ ತಂದೆಗೆ ಆರಾಮ ಇಲ್ಲದ ಬಗ್ಗೆ ಪ್ರಕರಣದಲ್ಲಿ ದಾಖಲೆಯನ್ನು ಸಲ್ಲಿಸಿದ್ದೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕಳೆದ ಮುದ್ದತ್ತಿನಂದು ನನ್ನ ತಂದೆ ನನ್ನನ್ನು ನ್ಯಾಯಾಲಯಕ್ಕೆ ಗಾಡಿಯ ಮೇಲೆ ಬಂದು ಕರೆದುಕೊಂಡು ಬಂದಿದ್ದನು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಮಾತ್ರೆಗಳನ್ನು ತೆಗೆದುಕೊಂಡು ಬರಲು ಬಂದಿದ್ದನು ಎಂದು ನುಡಿದಿರುತ್ತಾರೆ. ನನ್ನ ತಂದೆಗೆ ಆರಾಮ ಇಲ್ಲ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

1 ಮತ್ತು 10 ನೇ ಪ್ರತಿವಾದಿಯ ಮೂಲ ಊರು ಮುಳಗುಂದ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ. ಸಾಕ್ಷಿಯು ಮುಂದುವರೆದು ನಾವು 4 ಮನೆಯವರು ದಂಡಿನ ದುರ್ಗಮ್ಮನ ಕಟ್ಟಿಯ ಜಾಗದಲ್ಲಿ ಇದ್ದೇವೆ ಎಂದು ನುಡಿದಿರುತ್ತಾರೆ. ಸದರಿ ದುರ್ಗಮ್ಮನ ಕಟ್ಟಿಯು ಶೇತ್ಕಿ ಜಮೀನು ಇರುತ್ತದೆ ಎಂದರೆ ಸಾಕ್ಷಿಯು ಪಡಾ ಇರುತ್ತದೆ ಎಂದು ನುಡಿದಿರುತ್ತಾರೆ. ವಾದಿಯರು 1 ವಾರದ ಹಿಂದೆ ಸದರಿ ಜಮೀನಿನಲ್ಲಿ ಕುಸುಬಿ ಬಿತ್ತಿರುತ್ತಾರೆ ಎಂದರೆ ಸರಿಯಲ್ಲ. ನಾಗಸಮುದ್ರದಿಂದ ದಂಡಿನ ದುರ್ಗಮ ಕಟ್ಟಿಯು ಸುಮಾರು 2 ಕಿ.ಮೀ ದೂರದಲ್ಲಿದೆ. ಸರ್ವೇ ನಂ. 4/1, 4/2 ಮತ್ತು 13 ಇವು ವಾದಿಯರ ನೀರಾವರಿ ಮತ್ತು ಒಣಬೇಸಾಯ ಜಮೀನು ಇವೆ ಎಂದರೆ ಸಾಕ್ಷಿಯು ನಾವು

ಸರ್ವೇ ನಂ. 13 ರಲ್ಲಿ ಇದ್ದೇವೆ ಬೇರೆ ವಿಷಯ ನನಗೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ. ಸರ್ವೇ ನಂ. 4/1, 4/2 ಮತ್ತು 13 ವಾದಿಯರ ಶೇತ್ಕಿ ಜಮೀನು ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ.

10 ನೇ ಪ್ರತಿವಾದಿ ಈಗ ಜೀವಂತ ಇದ್ದಾರೆ. ದಿಃ 12-11-2022 ರಂದು 10 ನೇ ಪ್ರತಿವಾದಿ ಮೃತಪಟ್ಟಿರುತ್ತಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ. 10 ನೇ ಪ್ರತಿವಾದಿ ನನ್ನ ಅತ್ತೆಯಾಗಬೇಕು. 1 ನೇ ಪ್ರತಿವಾದಿಗೆ 10 ನೇ ಪ್ರತಿವಾದಿ ತಂಗಿಯಾಗಬೇಕು. 1 ನೇ ಪ್ರತಿವಾದಿ ಈ ದಿನ ನನ್ನೊಂದಿಗೆ ನ್ಯಾಯಾಲಯಕ್ಕೆ ಬಂದಿರುತ್ತಾನೆ ಎಂದರೆ ಸರಿ. 1 ನೇ ಪ್ರತಿವಾದಿ ನನಗೆ 10 ನೇ ಪ್ರತಿವಾದಿ ಮೃತಪಟ್ಟ ಬಗ್ಗೆ ನನಗೆ ಹೇಳಿರುವುದಿಲ್ಲ. ನಾನು 10 ನೇ ಪ್ರತಿವಾದಿ ಮೃತಪಟ್ಟಾಗ ಶವಸಂಸ್ಕಾರಕ್ಕೆ ಹೋಗಿದ್ದೇನು ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಿ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು )

ಓ ಹೇ ಕೆ ಸರಿ ಇದೆ

**ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ**
**ಜೆ.ಎಮ್.ಎಫ್.ಸಿ ಗದಗ**